


## ಪೀಠಿಕೆ

ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿಂದು ಕ್ರೈಸ್ತತ್ವಕ್ಕೆ ಇರುವ ಇತಿಹಾಸದ ಜ್ಞಾನವು ಬಹಳ ಕಡಿಮೆಯಾಗುತ್ತಿದೆ. ಕ್ರೈಸ್ತತ್ವದ ಮೂಲ (ಆದಿಕಾಂಡ 3:15) ಪೂರ್ವಕಾಲದ ಎಲ್ಲಾ ಧರ್ಮಗಳಿಗಿಂತ ಹಳೆಯದಾಗಿದ್ದು, ಕ್ರಿಸ್ತನ ಪುನರುತ್ಥಾನದ ನಂಬಿಕೆಯು ಐತಿಹಾಸದ ಸತ್ಯಾಂಶಗಳಲ್ಲಿ ಗಟ್ಟಿಯಾಗಿ ಹೆಣೆಯಲ್ಪಟ್ಟಿದ್ದು, ಈ ಸತ್ಯಾಂಶಗಳು ಕೆಲವು ಪಾಶ್ಚಾತ್ಯರಿಗೆ ತಿಳಿದಿವೆ, ಏಕೆಂದರೆ ಈ ಸತ್ಯಾಂಶಗಳು ಇತಿಹಾಸದ ಪ್ರಮುಖ ಪುಸ್ತಕಗಳಿಂದ ಹಾಗೂ ಸಂಸ್ಥೆಗಳಿಂದ ಅಳಸಿ ಹಾಕಲ್ಪಟ್ಟಿವೆ.

ಕ್ರೈಸ್ತತ್ವಕ್ಕೆ ದೃಢವಾದ ಇತಿಹಾಸ ಹಾಗೂ ಪದ್ಧತಿ ಇದೆ ಎಂಬುದು ಕೆಲವರಿಗೆ ತಿಳಿದಿದೆ. ಯೇಸುಕ್ರಿಸ್ತನ ಜನನವು ಬೇತ್ಲೇಹೇಮನಲ್ಲಿ ಆಗುವುದೆಂದು ಯಹೂದ್ಯ ಪ್ರವಾದಿಯೊಬ್ಬನು ಯೇಸು ಕ್ರಿಸ್ತನು ಹುಟ್ಟುವ ವಿಷಯವನ್ನು ಯೇಸು ಹುಟ್ಟುವದಕ್ಕಿಂತ 750 ವರ್ಷಗಳ ಹಿಂದೆಯೇ (ಮಿಕ 5:2) ಪ್ರವಾದಿಸಿದ್ದನು ಎಂಬುದು ನಿಮಗೆ ಗೊತ್ತೋ? ಯೇಸು ಕ್ರಿಸ್ತನು ಕನ್ಯೆ ಮರಿಯಳ ಗರ್ಭದಲ್ಲಿ ಹುಟ್ಟಿಬರುವನೆಂಬ ವಿಷಯವನ್ನು ಸಹ ಮತ್ತೊಬ್ಬ ಯಹೂದ್ಯ ಪ್ರವಾಧಿಯು ಸುಮಾರು 700 ವರ್ಷಗಳ ಹಿಂದೆಯೇ ಪ್ರವಾದಿಸಿದ್ದನೆಂಬುದು ನಿಮಗೆ ಗೊತ್ತೋ (ಯೆಶಾಯ 7:14)? ಮೊದಲನೆಯ ಶತಮಾನದಲ್ಲಿ ನಡೆದ ಯೇಸು ಕ್ರಿಸ್ತನ ಶ್ರಮೆ ಹಾಗೂ ಶಿಲುಭೆಯ ಮರಣದ ಪ್ರವಾದನೆಯನ್ನು ಮೊದಲೇ ಹೇಳಲಾಗಿತ್ತೆಂಬುದು ನಿಮಗೆ ಗೊತ್ತೋ (ಯೆಶಾಯ 53:4–6; ದಾನಿಯೇಲ 9:26)? ಆಧುನಿಕ ಅರಬ್ ಜನರು ಮತ್ತು ಯಹೂದ್ಯರ "ಪಿತ" ಅಬ್ರಾಹಾಮನನೆಂಬುದನ್ನು ಕ್ರಿ.ಪೂ. 2166ರ ಸುಮಾರಿಗೆ ಸತ್ಯವೇದದಲ್ಲಿ ಉಲ್ಲೇಖಿಸಲ್ಪಟ್ಟಿದೆ ಎಂಬುದು ನಿಮಗೆ ಗೊತ್ತೋ? ಅಬ್ರಹಾಮನಿಗೆ ಸುವಾರ್ತೆ ಸಾರಲ್ಪಟ್ಟಿರುವ ವಿಷಯವನ್ನು ಅಪೊಸ್ತಲನಾದ ಪೌಲನು ಮೊದಲನೆಯ ಶತಮಾನದಲ್ಲಿಯೇ ನಮೂದಿಸಿದ್ದಾನೆಂಬುದು ನಿಮಗೆ ಗೊತ್ತೋ (ಗಲಾತ್ಯದವರಿಗೆ 3:8)? ಯೇಸುಕ್ರಿಸ್ತನು ಅಬ್ರಾಹಾಮನ ಸಂತತಿಯವನೆಂದು ಮೊದಲೇ ಪ್ರವಾದಿಸಲ್ಪಟ್ಟಿತ್ತು ಎಂಬುದು ನಿಮಗೆ ಗೊತ್ತೋ? (ಆದಿಕಾಂಡ 12:3; ಮತ್ತಾಯ 1:1)

"ಸುವಾರ್ತೆ" ಎಂಬ ಪದದ ಅರ್ಥ "ಶುಭವಾರ್ತೆ," ಹಾಗೂ ಯೇಸುಕ್ರಿಸ್ತನ ಈ ಶುಭ ವಾರ್ತೆಯು ಬುದ್ಧನ ಕಾಲಕ್ಕಿಂತ ಸುಮಾರು 1500 ವರ್ಷಗಳ ಹಿಂದೆಯೇ ಸಾರಲ್ಪಡುತ್ತಿತ್ತು ಎಂಬುದು ನಿಮಗೆ ಗೊತ್ತೋ? ಈ "ಶುಭ ವಾರ್ತೆ" ಯನ್ನು ನಿಮ್ಮ ಕೈಯಲ್ಲಿರುವ ಈ ಕಿರು ಪುಸ್ತಕದಲ್ಲಿ ವಿವರಿಸಲಾಗಿದೆ. ದೇವರು ಮನುಷ್ಯನನ್ನು ಹಾಗೂ ಈ ಜಗತ್ತನ್ನು ಆರು ದಿನಗಳಲ್ಲಿ ಹೇಗೆ ಸೃಷ್ಟಿಸಿದನೆಂಬ ಕಥೆಯನ್ನು ಕಲಿಯುವಿರಿ. ದೇವರು ಮೊದಲ ಮನುಷ್ಯ ಮತ್ತು ಅವನ ಪತ್ನಿಯನ್ನು ಒಂದು

ತೋಟದಲ್ಲಿ ಇರಿಸಿ ಸಕಲ ಪ್ರಾಣಿ ಮತ್ತು ಪರಿಸರದ ಕಾವಲುಗಾರನನ್ನಾಗಿ ನೇಮಿಸಿದನು. ದೇವರು ಅವರಿಬ್ಬರಿಗೂ ಅವರು ಬಯಸಿದ್ದನ್ನು ಮಾಡವ ಸ್ವಾತಂತ್ರ್ಯ ಕೊಟ್ಟನು ಆದರೆ ಒಂದು ವಿಷಯ: ತೋಟದ ಮದ್ಯದಲ್ಲಿರುವ ಮರದ ಹಣ್ಣನ್ನು ಮಾತ್ರ ತಿನ್ನಬಾರದೆಂದು ಆಜ್ಞಾಪಿಸಿದ್ದನು (ಆದಿಕಾಂಡ 2:17).

ಮುಂದೆ ಓದುವಾಗ, ನಮ್ಮ ಪೂರ್ವಜರು ತಮ್ಮಲ್ಲಿರುವ ಗರ್ವ ಮತ್ತು ಅವಿಧೇಯತೆಯಿಂದ ದೇವರು ಅವರಿಗೆ ಕೊಟ್ಟಿರುವ ಮಹತ್ವದ ಸ್ಥಾನವಾಗಿರುವ ಸ್ನೇಹಿತನೆಂಬ ಪಟ್ಟದಿಂದ ಮತ್ತು ಭೂಮಿಯನ್ನು ನೋಡಿಕೊಳ್ಳುವ ಮೇಲ್ವಿಚಾರಕರ ಸ್ಥಾನದಿಂದ ಕೆಳಗೆ ಬಿದ್ದರು ಎಂಬುದನ್ನು ಕಲಿಯುವಿರಿ, ಈ ಲೋಕದಲ್ಲಿಯ ಅನೇಕ ಮಾರ್ಗಗಳು ಏಕೆ ಭಯಂಕರವಾಗಿವೆ ಎಂಬುದನ್ನು ಕಲಿಯುವಿರಿ. ದೇವರು ಸೃಷ್ಟಿಸಿರುವುದೆಲ್ಲವು “ಬಹಳ ಒಳ್ಳೆಯದು” ಎಂದು ಸತ್ಯವೇಧದಲ್ಲಿ ಹೇಳಿದ್ದರೂ ಸಹ ಯುದ್ಧಗಳು, ರೋಗಗಳು, ಬರಗಾಲ, ದುಷ್ಟತನಗಳು ಏಕೆ ಈ ಲೋಕದಲ್ಲಿ ಇರುವುವು ಎಂಬುದನ್ನು ಕಲಿಯುವಿರಿ (ಆದಿಕಾಂಡ 1:31). ಆರಂಭದಲ್ಲಿ ಹೇಗೆ ಎಲ್ಲಾ ಪ್ರಾಣಿಗಳು ಸಸ್ಯಹಾರಿಗಳಾಗಿದ್ದು ಸಮಾಧಾನದಿಂದ ಜೀವಿಸುತ್ತಿದ್ದವು ಎಂಬುದನ್ನು ಸಹ ಕಲಿಯುವಿರಿ. ಆದಿಯಲ್ಲಿ ನಿಸರ್ಗವು ಈಗಿನ ಹಾಗೆ ಕಠಿಣವಾಗಿರಲ್ಲಿಲ್ಲ (ಆದಿಕಾಂಡ 1:30).

ಪ್ರಿಯ ಸ್ನೇಹಿತನೆ ಓದುವದನ್ನು ಮುಂದುವರೆಸಿ, ಆಗ ಈ ಲೋಕದಲ್ಲಿ ನಿರೀಕ್ಷೆಯಿದೆ ಎಂಬುದನ್ನು ಕಂಡುಕೊಳ್ಳುವಿರಿ. ನಿಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟ ದೇವರ ಮಗನಾದ ಯೇಸುಕ್ರಿಸ್ತನ ಕುರಿತು ಕಲಿಯಿರಿ, ಈ “ಪುರಾತನ ಮಾರ್ಗವನ್ನು” ಅನುಸರಿಸಿರಿ, ಇದು ದೇವರು ಮನುಷ್ಯನಿಗೆ ಬರೆದ ಪ್ರೇಮ ಪತ್ರದ ಪುಟಗಳನ್ನು ಬಿಚ್ಚಿ ತೋರಿಸುವದು.

# ಪುರಾತನ ಮಾರ್ಗ

ಆದಿಯಲ್ಲಿ ದೇವರು ಭೂಮಿ, ಆಕಾಶವನ್ನು ಸೃಷ್ಟಿಸಿದನು. ನಂತರ ಮೊದಲ ಪುರುಷನಾದ ಆದಾಮನನ್ನು ಮತ್ತು ಸ್ತ್ರೀಯಾದ ಹವ್ವಳನ್ನು ಸೃಷ್ಟಿಸಿ, ಇವರಿಬ್ಬರನ್ನು ಒಂದು ಸುಂದರವಾದ ತೋಟದಲ್ಲಿ ಇರಿಸಿ. ಅವರಿಗೆ ಕೇವಲ ಒಂದೇ ಒಂದು ಆಜ್ಞೆಯನ್ನು ವಿಧಿಸಿದನು: ಅದೇನೆಂದರೆ ಆ ತೋಟದ ಮದ್ಯದಲ್ಲಿರುವ ಮರದ ಹಣ್ಣನ್ನು ತಿನ್ನಬಾರದೆಂದು ಆಜ್ಞಾಪಿಸಿದನು. ಆದರೆ ನಮ್ಮ ಆದಿ ತಂದೆತಾಯಿಗಳು ದೇವರಿಗೆ ಅವಿಧೇಯರಾಗಿ ಈ ಲೋಕದಲ್ಲಿ ದುಃಖ ಹಾಗೂ ಮರಣವನ್ನು ತಂದರು. ಮನುಷ್ಯರು ದಾರಿ ತಪ್ಪಿದಾಗ್ಯೂ ಸಹ ದೇವರು ಮನುಷ್ಯ ಮತ್ತು ದೇವರ ಸಂಬಂಧವನ್ನು ಮರಳಿ ಸ್ಥಾಪಸುವುದಕ್ಕಾಗಿ, ಒಬ್ಬ ವಿಮೋಚಕನನ್ನು ಭೂಮಿಗೆ ಕಳಿಸುತ್ತೇನೆಂದು ವಾಗ್ದಾನ ಮಾಡಿದನು. ಅವರು ಆತನನ್ನು ನಂಬುವದಾದರೆ ರಕ್ಷಣೆ ಹೊಂದುವರು.



***“ಆದಾಮ ಮತ್ತು ಹವ್ವಳು ಎದೇನ್ ತೋಟದಿಂದ ಹೊರಗೆ ಹಾಕಲ್ಪಟ್ಟರು.” (ಆದಿಕಾಂಡ 3:22–24)***

ಸತ್ಯವೇದದ ಪ್ರಕಾರ ಆದಾಮ ಮತ್ತು ಹವ್ವಳ ವಂಶದವರು ತಮ್ಮನ್ನು ಮಾರ್ಪಡಿಕೊಳ್ಳಲು ನಿರಾಕರಿಸಿ ದೇವರ ಅಜ್ಞೆಗೆ ವಿರುದ್ಧ ಜೀವಿಸಿದರು. ಆಗ ದೇವರು ನೋಹನಿಗೆ ಒಂದು ದೊಡ್ಡ ನಾವೆಯನ್ನು ಕಟ್ಟಲು ತಿಳಿಸಿದನು. ಮತ್ತು ಆ ನಾವೆಯಲ್ಲಿ ಪ್ರತಿಯೊಂದು ಜಾತಿಯ ಗಂಡು ಹೆಣ್ಣು ಎಂಬ ಎರಡೆರಡು ಪ್ರಾಣಿಗಳನ್ನು ಅದರಲ್ಲಿಡಲು ತಿಳಿಸಿದನು. ಏಕೆಂದರೆ, ದೇವರು ನೋಹನ ಕುಟುಂಬದ ಎಂಟು ಜನರನ್ನು, ನಾವೆಯಲ್ಲಿರುವ ಪಶುಪ್ರಾಣಿಪಕ್ಷಿಗಳನ್ನು ಬಿಟ್ಟು ಭೂಮಿಯ ಮೇಲಿರುವ ಎಲ್ಲಾ ಜೀವರಾಶಿಗಳನ್ನು ಪ್ರಳಯದ ಮೂಲಕ ನಾಶ ಮಾಡಲು ತೀರ್ಮಾನಿಸಿದ್ದನು.



***“ನೋಹನ ನಾವೆ” (ಆದಿಕಾಂಡ 6–8).***

ಬಹುತೇಕ ಸಂಸ್ಕೃತಿಗಳು ಪ್ರಳಯದ ಕಥೆಯನ್ನು ಪುರಾಣವೆಂದು ಹಾಗೂ ದಂತ ಕಥೆಯೆಂದು ಪರಿಗಣಿಸಿವೆ. ಚೀನಾ ಭಾಷೆಯಲ್ಲಿ "ನಾವ" ಎಂಬ ಪದವು ಮೂರು ಸಂಪ್ರದಾಯಿಕ ಲಕ್ಷಣಗಳನ್ನು ಒಳಗೊಂಡಿದೆ– "ದೋಣಿ", "ಎಂಟು" ಹಾಗೂ "ಜನರು". ಕ್ರಿ.ಪೂ. 3000ದಲ್ಲಿ ಈ ಆಧ್ಭುತವಾದ ಸತ್ಯ ಘಟನೆ ನಡೆದಿದೆ ಎಂದು ಚೀನಾದ ಅನೇಕ ವಿದ್ವಾಂಸರು ದೋಣಿಗಳನ್ನು ತೋರಿಸಿದ್ದಾರೆ. ಏಕೆಂದರೆ ಈ ದೋಣಿಗಳು ಬೈಬಲಿನ ಜ್ಞಾನದ ಪ್ರತಿಬಿಂಬಗಳಾಗಿವೆ. ಜಗತ್ತಿನಾದ್ಯಾಂತ ಈ ಪ್ರಳಯದ ದಾಖಲೆಯು ಬೈಬಲಿನಲ್ಲಿದೆ ಎಂದು ತಿಳಿಸುತ್ತದೆ (ಆದಿಕಾಂಡ 7:13).




**ದೋಣಿ ಎಂಟು ಜನರು ನಾವೆ**

ಪ್ರಳಯದ ನಂತರ ನೋಹ ಮತ್ತು ಆತನ ಕುಟುಂಬದ ಜನರು ಹಾಗೂ ಎಲ್ಲಾ ಪ್ರಾಣಿಗಳು ನಾವೆಯಿಂದ ಹೊರಗೆ ಬಂದು ಹೊಸ ಜಗತ್ತನ್ನು ಆರಂಬಿಸಿದವು (ಆದಿಕಾಂಡ 8:18–19). ದೇವರು ನೋಹನನ್ನು ಅವನ ಮಕ್ಕಳನ್ನು ಆಶೀರ್ವಾದಿಸಿ ಬಹು ಸಂತಾನವುಳ್ಳವರಾಗಿ ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ ಎಂದು ಹೇಳಿದನು. ಆದರೆ ನೋಹನ ವಂಶಸ್ಥರೆಲ್ಲರೂ ಗರ್ವದಿಂದ ದೇವರಿಗೆ ಅವಿಧೇಯರಾಗಿ ಒಂದೇ ಭಾಷೆ ಇರುವವರೆಲ್ಲರು ಸೇರಿ ಒಂದು ದೊಡ್ಡ ಪಟ್ಟಣವನ್ನು, ಹಾಗೂ ಆಕಾಶವನ್ನು ಮುಟ್ಟುವ ಗೋಪುರವನ್ನು (ಬಾಬೆಲ್ ಗೋಪುರ) ಕಟ್ಟಲು ಬಾಬೆಲಿನ ಹತ್ತಿರ ಪುರಾತನ ಇರಾಕಿನಲ್ಲಿ ನೆಲೆಸಿದರು (ಆದಿಕಾಂಡ 11:1–19).



*“ಬಾಬೆಲ್ ಗೋಪುರ” (ಆದಿಕಾಂಡ 11:1–9).*

ಆಗ ಅವರೆಲ್ಲರು ಒಂದೇ ಭಾಷೆಯನ್ನು ಮಾತನಾಡಿದರು. ದೇವರು ಇದನ್ನು ನೋಡಿ ಕೆಳಗೆ ಬಂದು ಇವರಲ್ಲಿ ಒಬ್ಬರ ಮಾತು ಇನ್ನೋಬ್ಬರಿಗೆ ತಿಳಿಯದಂತೆ ಇವರ ಭಾಷೆಯನ್ನು ತಾರು–ಮಾರು ಮಾಡಿದರು (ಆದಿಕಾಂಡ 11:1–7). ಅವರ ಸಹಜ ಜೀವನ ಹಾಗೂ ಕೆಲಸ ಮಾಡುವದು ಅಸಾಧ್ಯವಾಯಿತು. ಆಗ ಯಾರ್‍ಯಾರು ಒಂದೇ ಭಾಷೆಯನ್ನು ಮಾತನಾಡುತ್ತಿದ್ದಾರೋ ಅವರೆಲ್ಲರೂ ಒಂದೊಂದು ದಿಕ್ಕಿಗೆ ಹೋಗಿ ಭೂಮಿಯಲ್ಲೆಲ್ಲಾ ಚದುರಿ ಹೋದರು. ಅವರೆಲ್ಲರೂ ಇವತ್ತು ಜಗತ್ತಿನಲ್ಲಿ ತಮಗೆ ತಿಳಿದಂತೆ ಮತ ಧರ್ಮಗಳನ್ನು ಸೃಷ್ಠಿ ಮಾಡುತ್ತಾ ಬಂದರು. ಅಷ್ಟೇ ಅಲ್ಲದೇ, ಅವರು ತಮಗೆ ತಿಳಿದ ಮಾರ್ಗದಲ್ಲಿ ನಡೆಯುತ್ತಾ ಜೀವಿಸಿ ದೇವರ ಜ್ಞಾನದಲ್ಲಿ ಆಸಕ್ತಿ ಇಲ್ಲದವರಾದರು.

# ಮಾನವರು ತಮ್ಮದೇಯಾದ ರೀತಿಯಲ್ಲಿ ಧರ್ಮಗಳನ್ನು ಸೃಷ್ಠಿಸಲು ಪ್ರಾರಂಭಿಸಿದರು

ನಮ್ಮ ಪೂರ್ವಜರು ದೇವರನ್ನು ವೈಯಕ್ತಿಕವಾಗಿ ತಿಳಿದುಕೊಂಡಿದ್ದರೂ ಸಹ ಕಾಲಕ್ರಮೇಣ ದೇವರನ್ನು ತಿಳಿಯುವ ಜ್ಞಾನವನ್ನು ಕಳೆದುಕೊಂಡರು. ಮತ್ತು ಚದುರಿ ಹೋದ ಇವರು ತಮ್ಮ ತಿಳಿವಳಿಕೆಗೆ, ಜ್ಞಾನಕ್ಕೆ ತಕ್ಕಂತೆ ಸ್ವಂತ ಧರ್ಮಗಳನ್ನು ಸೃಷ್ಠಿ ಮಾಡುತ್ತಾ ಬಂದರು.

ಮನುಷ್ಯನು ಕೂಡ ಇತರ ಪ್ರಾಣಿಗಳಂತೆ ಇದ್ದಾನೆಂದು ಕೆಲವರು ಹೇಳಿದರು; ಇನ್ನೂ ಕೆಲವರು ಮನುಷ್ಯನು “ದೇವರ” ವಂಶದವರಾಗಿದ್ದಾರೆ ಅಂದರು, ಹಾಗೂ ಇನ್ನೂ ಕೆಲವರು ಈ ವಿಶ್ವವು ಯಾವಾಗಲು ಅಸ್ತಿತ್ವದಲ್ಲಿದ್ದು ಸಾಂಪ್ರದಾಯಿಕ ಜೀವಿತದ ನಿಯಮಗಳನ್ನು ಪ್ರಸ್ತಾಪಿಸುತ್ತದೆಂದು ದೇವರ ವಿಷಯವನ್ನು ತಿರಸ್ಕರಿಸಿದರು.

ಮನುಷ್ಯರು ಮರ, ನದಿ, ಪೂರ್ವಜರನ್ನು, ಚಂದ್ರ ಮತ್ತು ಸೂರ್ಯನನ್ನು ಆರಾಧಿಸಲಾರಂಭಿಸಿದರು. ಕೆಲವರು ಎಲ್ಲಾ ಮನುಷ್ಯರು “ದೇವರು” ಅಂದರು! ಹೀಗೆ ಜನರು ದೇವರ ವಾಗ್ದಾನದ ಜ್ಞಾನವನ್ನು ಮತ್ತು ಪುರಾತನ ಮಾರ್ಗವನ್ನೂ ಕಳೆದುಕೊಂಡರು.



ಯೆಹೂದಿ



ಇಸ್ಲಾಂ



ಹಿಂದೂ



ಬೌದ್ಧ



ಕನ್‌ಫ್ಯೂಸಿಯನಿಸಮ್



ಅನ್ಯರು

# ವಿಶೇಷ ವಾಗ್ದಾನ

ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ದೇವರು ಊರ್ ಎಂಬ ಸ್ಥಳದಲ್ಲಿ (ಇಂದಿನ ಇರಾಕ್) ಅಬ್ರಹಾಮನೆಂಬ ವ್ಯಕ್ತಿಯೊಂದಿಗೆ ಮಾತಾಡಿದನು. ಈ ಅಬ್ರಾಹಮನು ಕ್ರಿ.ಪೂ. 2166 ರಲ್ಲಿ ಜನಿಸಿ ಮನುಷ್ಯರು ತಾವೇ ಸೃಷ್ಟಿಸಿಕೊಂಡ ದೇವರನ್ನು ಆರಾಧಿಸುವ ವ್ಯವಸ್ಥೆಯಲ್ಲಿ ಜೀವಿಸುತ್ತಿದ್ದನು. ಆ ಸಮಯದಲ್ಲಿ ದೇವರು ಅಬ್ರಾಹಾಮನಿಗೆ ತನ್ನ ತಂದೆ– ತಾಯಿ ಹಾಗೂ, ಸ್ವದೇಶವನ್ನು ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು (ಆದಿಕಾಂಡ 12:1–3) ಅಂದನು.



***ಅಬ್ರಾಹಾಮನ ಕಾಲದಲ್ಲಿರುವ ಪ್ರಾಚೀನ ಇರಾಕ್, ಕ್ರಿ.ಪೂ. 2100 (ಆದಿಕಾಂಡ 11–12)***

ಅಬ್ರಾಹಾಮನು ತನ್ನ 75ನೇ ವಯಸ್ಸಿನಲ್ಲಿ ದೇವರ ಸೂಚನೆಯ ಮೇರೆಗೆ ಮಧ್ಯ ಪ್ರಾಚ್ಯದಲ್ಲಿರುವ ಇಸ್ರಾಯೇಲಿಗೆ ಪ್ರಯಾಣ ಮಾಡಿದನು. ದೇವರು ಅಬ್ರಾಹಾಮನಿಗೆ ಮೂರು ಪ್ರಮುಖವಾದ ವಾಗ್ದಾನಗಳನ್ನು ನೀಡಿದನು. ಅವುಗಳಲ್ಲಿ ಶ್ರೇಷ್ಠವಾದ ವಾಗ್ದಾನವೆಂದರೆ, "ನೀನು ಆಶೀರ್ವಾದದ ನಿಧಿಯಾಗಿರುವಿ ನಿನ್ನನ್ನುಆಶೀರ್ವದಿಸುವವರನ್ನು ಆಶೀರ್ವದಿಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವುದು" (ಆದಿಕಾಂಡ 12:3).



***"ಅಬ್ರಾಹಾಮನು ತನ್ನ ತಂದೆಯ ಮನೆ ಹಾಗೂ ದೇಶವನ್ನು ಬಿಟ್ಟು ದೇವರನ್ನು ಹಿಂಬಾಲಿಸಿದನು" (ಆದಿಕಾಂಡ 12:1–4).***

ಅಬ್ರಾಹಾಮನು ಯಹೂದ್ಯರಿಗೆ (ಇಸ್ರಾಯೇಲರಿಗೆ) ಹಾಗೂ ಅರಬ್ ಜನರಿಗೆ ಮೂಲ ಪಿತೃನಾದನು. ಆದರೆ ನಮ್ಮ ಪೂರ್ವಜರಿಗೆ ನೀಡಲಾದ ವಾಗ್ದಾನವು ಈತನ ವಂಶಸ್ಥರ ಮೂಲಕವೇ ಭೂಮಿಯಲ್ಲಿಯ ಎಲ್ಲಾ ದೇಶಗಳಿಗೆ ನೆರವೇರಿಸಲ್ಪಡುವುದು (ಆದಿಕಾಂಡ 3:15).

ದೇವರು ತನ್ನ ವಾಗ್ದಾನವನ್ನು ಅಬ್ರಾಹಾಮನ ಮಗನಾದ ಇಸಾಕನಿಗೂ ಹಾಗೂ ಮೊಮ್ಮಗನಾದ ಯಾಕೋಬನಿಗೂ ತಿರುಗಿ ವಾಗ್ದಾನ ಮಾಡಿದನು. ದೇವರು ಯಾಕೋಬನಿಗೆ ಹನ್ನೆರಡು ಕುಟುಂಬಗಳನ್ನು ಕೊಟ್ಟನು. ಅವರನ್ನು ಇಸ್ರಾಯೇಲರೆಂದು ಕರೆದರು.

ಈ ಇಸ್ರಾಯೇಲ್ಯರೆಲ್ಲರೂ ದುಷ್ಟರಾದ ರಾಜರ ದೆಸೆಯಿಂದ ಐಗುಪ್ತ ದೇಶದಲ್ಲಿ ದಾಸತ್ವಕ್ಕೆ ಒಳಗಾದರು. ಐಗುಪ್ತರ ರಾಜನಾದ ಫರೋಹನು ಇಸ್ರಾಯೇಲ್ಯರನ್ನು ದುರುಪಯೋಗ ಮಾಡಿಕೊಂಡು ಸಾಯುವಷ್ಟು ಕಠಿಣವಾಗಿ ದಂಡಿಸಿಕೊಂಡನು (ವಿಮೋಚನಕಾಂಡ 1). ಕೊನೆಯಲ್ಲಿ ಸುಮಾರು ಕ್ರಿ.ಪೂ. 1446 ರಲ್ಲಿ ದೇವರು ಇವರನ್ನು ಬಿಡಿಸುವುದಕ್ಕಾಗಿ ಶ್ರೇಷ್ಠನಾದ ಮೋಶೆ ಎಂಬ ಹೆಸರುಳ್ಳ ಒಬ್ಬ ವ್ಯಕ್ತಿಯನ್ನು ಕಳುಹಿಸಿದನು.

# ವಿಮೋಚಕನಾದ ಮೋಶೆ

ದೇವರು ಎಂಬತ್ತು ವರ್ಷ ಪ್ರಾಯದವನಾದ ಮೋಶೆಯನ್ನು ಕರೆದು ಅವನನ್ನು ಫರೋಹನಿಗೆ ಎದುರಾಗಿ, "ನನ್ನ ಜನರಾದ ಇಸ್ರಾಯೇಲ್ಯರನ್ನು ಹೋಗಲು ಬಿಡು" ಎಂದು ಹೇಳುವಂತೆ ತಿಳಿಸಿದನು. (ವಿಮೋಚನಕಾಂಡ 3). ಮೊದಲು ಫರೋಹನು ಇಸ್ರಾಯೇಲರನ್ನು ಐಗುಪ್ತದಿಂದ ಕಳುಹಿಸುವುದಕ್ಕೆ ತಿರಸ್ಕರಿಸಿದನು. ಆಗ ದೇವರು ಈ ಐಗುಪ್ತ ದೇಶದ ಮೇಲೆ ಬಾಧೆಗಳನ್ನು ಕಳುಹಿಸಿದನು. ಆಗ ಫರೋಹನು ಇಸ್ರಾಯೇಲ್ಯರನ್ನು ದಾಸತ್ವದಿಂದ ಹೊರಟು ಹೋಗಲಿ ಎಂದು ಅನುಮತಿ ನೀಡಿದನು.

(ವಿಮೋಚನಕಾಂಡ 4–10). ದೇವರು ಕೊನೆಯ ಬಾಧೆಯನ್ನು ಕಳುಹಿಸುವ ಮೋಶೆಗೆ ಇಸ್ರಾಯೇಲರ ಹಿರಿಯರೆಲ್ಲರನ್ನು ಕರೆಸಿ ಅವರಿಗೆ ನಿಮ್ಮ ನಿಮ್ಮ ಕುಟುಂಬಗಳಿಗೋಸ್ಕರ ಕುರಿಯ ಹಿಂಡಿನಿಂದ ಪರಿಪೂರ್ಣವಾಗಿ ಕೊಬ್ಬಿದ ಮರಿಗಳನ್ನು ತೆಗೆದುಕೊಂಡು ಪಸ್ಕ ಹಬ್ಬಕ್ಕೆ ಕೊಯ್ಯಿರಿಯೆಂದು ಹೇಳಿದನು, ಯಜ್ಞ ಸಮರ್ಪಿಸಿರಿ. ಮತ್ತು ಹಿಸೋಪ್ ಗಿಡದ ಬರಲನ್ನು ತೆಗೆದುಕೊಂಡು ಬಟ್ಟಲಿನಲ್ಲಿರುವ ಆ ರಕ್ತದಲ್ಲಿ ಅದ್ದಿ ಬಾಗಿಲಿನ ಮೇಲಣ ಪಟ್ಟಿಗೂ ಎರಡು ನಿಲುವು ಕಂಬಗಳಿಗೂ ಹಚ್ಚಬೇಕು. ತರುವಾಯ ಒಬ್ಬರೂ ಸೂರ್ಯೋದಯದೊಳಗಾಗಿ ಹೊರಗೆ ಹೋಗಕೂಡದು. ದೇವರು ಐಗುಪ್ತರನ್ನು ನಾಶ ಮಾಡುವುದಕ್ಕೆ ದೇಶದ ನಡುವೆ ಹಾದು ಹೋಗುವಾಗ ನಿಮ್ಮ ನಿಮ್ಮ ಮನೆ ಬಾಗಿಲಿನ ಮೇಲಣ ಪಟ್ಟಿಗಳ ಎರಡು ನಿಲುವು ಕಂಬಗಳಲ್ಲಿ ಹಚ್ಚಿರುವ ಆ ರಕ್ತವನ್ನು ಕಂಡು ಮುಂದಕ್ಕೆ ದಾಟಿ ಹೋಗುವನು. ಐಗುಪ್ತರ ಪ್ರಾಣ ತೆಗೆಯುವುದಕ್ಕೆ ಬರುವ ಸಂಹಾರಕನು (ಸಾವಿನ ದೂತ) ಆ ರಕ್ತವನ್ನು ಕಂಡು ನಿಮ್ಮನ್ನು ನಾಶಮಾಡುವದಿಲ್ಲ.



***“ರಕ್ಷಣೆಗಾಗಿ ಇಸ್ರಾಯೇಲರು ತಮ್ಮ ಮನೆಯ ಮೇಲಣ ಪಟ್ಟಿ ಮತ್ತು ನಿಲುವು ಕಂಬಗಳಿಗೆ ರಕ್ತವನ್ನು ಹಚ್ಚುತ್ತಿರುವರು” (ವಿಮೋಚನಕಾಂಡ 12:21–23).***

ಯಹೂದ್ಯರು ದೇವರಿಗೆ ವಿಧೇಯರಾಗಿ ಆತನು ಹೇಳಿದ ಹಾಗೆಯೇ ತಮ್ಮ ತಮ್ಮ ಮನೆಯ ಬಾಗಿಲಿನ ಪಟ್ಟಿಗಳಿಗೆ ಮತ್ತು ನಿಲುವು ಕಂಬಗಳಿಗೆ ರಕ್ತವನ್ನು ಲೇಪಿಸಿದರು. ಸಾವಿನ ದೂತನು ಬಂದು ಸಂಚರಿಸುವಾಗ ಮನೆಯ ಬಾಗಿಲಿಗೆ ರಕ್ತ ಹಚ್ಚಿದ್ದನ್ನು ಕಂಡು ಆ ಮನೆಯನ್ನು ರಕ್ಷಿಸಿ ಮುಂದಕ್ಕೆ ಹೋದನು.

ಇದಾದ ಮೇಲೆ ಫರೋಹನು ಕೊನೆಯದಾಗಿ ಯಹೂದ್ಯರನ್ನು ತನ್ನ ದೇಶದಿಂದ ಬಿಡುಗಡೆ ಮಾಡಿದನು. ಸುಮಾರು ಎರಡು ಮಿಲಿಯನ್ (ಇಪ್ಪತ್ತು ಲಕ್ಷ) ಇಸ್ರಾಯೇಲ್ಯರು ಮೋಶೆಯನ್ನು ಹಿಂಬಾಲಿಸಿ ಐಗುಪ್ತ ದೇಶದಿಂದ ಸ್ವತಂತ್ರವಾಗಿ ಹೊರಗೆ ಬಂದು ಆತನನ್ನು ಹಿಂಬಾಲಿಸಿದರು. ನಂತರ ಫರೋಹನು ತನ್ನ ಮನಸ್ಸನ್ನು ಬದಲಾಯಿಸಿ ಅವರನ್ನು ಬೆನ್ನಟ್ಟಿ ಎಂದು ತನ್ನ ಸೈನಿಕರನ್ನು ಕಳುಹಿಸಿದನು. ಫರೋಹನ ಸೈನ್ಯವು ಇಸ್ರಾಯೇಲರನ್ನು ಬೆನ್ನಟ್ಟಿ ಬಂದಿತು ಆದರೆ ದೇವರು ಇಲ್ಲಿ ಒಂದು ಮಹಾ ಅದ್ಭುತ ಕಾರ್ಯವನ್ನು ಮಾಡಿದನು. ಅದೇನೆಂದರೆ, ಇಸ್ರಾಯೇಲರ ಎದುರಿಗಿದ್ದ ಕೆಂಪು ಸಮುದ್ರವನ್ನು ದೇವರು ಇಬ್ಭಾಗಮಾಡಿ, ಸಮುದ್ರದಲ್ಲಿ ನೀರಿನ ಗೋಡೆ ನಿರ್ಮಿಸಿ ತನ್ನ ಜನರು ಸಮುದ್ರದ ಮದ್ಯದಲ್ಲಿ ಹಾಯ್ದು ಹೋಗುವಂತೆ ಮಾಡಿದನು. ಇಸ್ರಾಯೇಲರು ಸಮುದ್ರದ ಮದ್ಯದಲ್ಲಿ ನಡೆಯುವುದನ್ನು ಕಂಡು ಫರೋಹನ ಸೈನ್ಯವು ಕೂಡ ಸಮುದ್ರದಲ್ಲಿ ನಡೆಯಲು ಹೋಗಿ ಸಮುದ್ರವು ಮೊದಲಿನಂತೆ ತುಂಬಿಕೊಂಡಿತು. ಫರೋಹನ ಸೈನ್ಯವು ನೀರಿನಲ್ಲಿ ಮುಳುಗಿ ನಾಶವಾಯಿತು (ವಿಮೋಚನಕಾಂಡ 14).

# ದೇವರ ಆಜ್ಞೆಗಳು

ದೇವರು ಇಸ್ರಾಯೇಲ್ಯರನ್ನು ಸೀನಾಯ ಬೆಟ್ಟ ಎಂಬ ಸ್ಥಳಕ್ಕೆ ನಡೆಸಿದನು. ಆ ಸ್ಥಳದಲ್ಲಿ ದೇವರು ಅವರಿಗೆ ದಶಾಜ್ಞೆಗಳನ್ನು ನೀಡಿ ಅವುಗಳನ್ನು ಕೈಕೊಂಡು ನಡೆಯುವಂತೆ ಇಸ್ರಾಯೇಲರಿಗೆ ತಿಳಿಸಿದನು, ಇದರಿಂದ ಅವರು ಆತನ ಪ್ರಜೆಗಳೆಂಬ ಒಪ್ಪಂದಕ್ಕೆ ಸೂಚನೆಯಾಗುವದು. ದೇವರು ಇಸ್ರಾಯೇಲ್ಯರನ್ನು ವಾಗ್ದಾನ ಮಾಡಿದ ದೇಶದಲ್ಲಿ ಸುರಕ್ಷಿತವಾಗಿ ಇರಿಸಿದರೂ ಸಹ ಇಸ್ರಾಯೇಲರು ಆತನಿಗೆ ಕೃತಜ್ಞತೆಯುಳ್ಳವರಾಗಿ ನಡೆಯದೆ, ದೇವರನ್ನು ಮರೆತು ದೇವರ ಪುರಾತನ ಮಾರ್ಗವನ್ನು ಬಿಟ್ಟು ತಮ್ಮದೇ ಆದ ಮಾರ್ಗದಲ್ಲಿ ಜೀವಿಸತೊಡಗಿದರು.



***ಮೋಶೆಯು ಸೀನಾಯ ಬೆಟ್ಟದಲ್ಲಿ ದಶಾಜ್ಞೆಗಳನ್ನು ಪಡೆದುಕೊಂಡನು (ವಿಮೋಚನಕಾಂಡ 20:1–21).***

# ಅವರ ಪಾಪಗಳಿಗೆ ಬದಲಾಗಿ ಬೇರೊಂದು ಬಲಿ ಕೊಡುವುದು

ಇಸ್ರಾಯೇಲರು ದೇವರಿಗೆ ಅವಿದೇಯರಾಗಿದ್ದಕ್ಕೆ ಅವರನ್ನು ನಾಶಮಾಡುವದರ ಬದಲು, ಅವರಿಗೆ ಹೀಗೆ ಆಜ್ಞಾಪಿಸಿದನು, ಪೂರ್ಣಾಂಗವಾದ, ದೋಷವಿಲ್ಲದ, ಆರೋಗ್ಯವಂತ ಒಂದು ಟಗರನ್ನು ದೇವದರ್ಶನದ ಗುಡಾರದ ಬಾಗಿಲಿಗೆ ತರಬೇಕು. ದೇವರಿಗೆ ಅವಿದೇಯನಾದ ಮನುಷ್ಯನು ಆ ಟಗರಿನ ಮೇಲೆ ಕೈ ಇಡಬೇಕು. ಆಗ ಮನುಷ್ಯನ ಪಾಪವು ಆ ಟಗರಿಗೆ ವರ್ಗಾಯಿಸಲ್ಪಡುವದು. ಆಗ ಅದು ಅವನಿಗೊಸ್ಕರ ದೋಷ ಪರಿಹಾರ ಮಾಡುವುದಕ್ಕಾಗಿ ಅಂಗೀಕಾರವಾಗುವುದು. ಯಜ್ಞ ಸಮರ್ಪಿಸುವುದು ಹಾಗೂ ಬಲಿಕೊಡುವುದು ಕ್ರಿ.ಪೂ. 1400 ಕ್ಕಿಂತಲೂ ಮೊದಲು ನಡೆಯುತ್ತಿದ್ದವು. ಆದರೆ ಈಗಲೂ ಸಹ ಜನರು ದೇವರನ್ನು ಮರೆತ್ತಿದ್ದಾರೆ ಮತ್ತು ದೇವರ ಮಾರ್ಗದಿಂದ ದೂರ ಸರಿದಿದ್ದಾರೆ. ದೇವರ ಪುರಾತನ ಮಾರ್ಗವನ್ನು ಬಿಟ್ಟುಬಿಟ್ಟು ತಮ್ಮದೇಯಾದ ಸ್ವಂತ ಮಾರ್ಗದಲ್ಲಿ ಜೀವಿಸುತ್ತಿದ್ದಾರೆ.



*“ಮನುಷ್ಯನು ತನ್ನ ಪಾಪಕ್ಕೆ ಕುರಿಯನ್ನು ಬಲಿಯಾಗಿ ಸಮರ್ಪಿಸುವುದು” (ಯಾಜಕಕಾಂಡ 1:4).*

ಕ್ರಿ.ಪೂ. 1000 ರ ಸುಮಾರಿಗೆ ದೇವರು ಅಬ್ರಾಹಾಮನ ವಂಶಸ್ಥನಾದ ದಾವೀದನನ್ನು ಇಸ್ರಾಯೇಲರ ಶ್ರೇಷ್ಠ ಅರಸನನ್ನಾಗಿ ಎಬ್ಬಿಸಿದನು. ದೇವರು ಆದಾಮ ಮತ್ತು ಹವ್ವಳಿಗೆ ಮಾಡಿದ ವಾಗ್ದಾನವನ್ನು ಮತ್ತು ಅಬ್ರಾಹಾಮನಿಗೆ ಮಾಡಿದ ವಾಗ್ದಾನವನ್ನು ದೃಡೀಕರಿಸಿದನು. ಅಬ್ರಾಹಾಮನ ವಂಶಸ್ಥನಾದ ದಾವೀದನ ಆಳ್ವಿಕೆ ಮತ್ತು ದಾವೀದನ ಸಿಂಹಾಸನವು ನಿತ್ಯವಾಗಿರುವದೆಂದು ದೇವರು ಹೇಳುತ್ತಾನೆ. ಮುಂದೆ ಬರುವ ರಾಜನು “ದಾವೀದ ಕುಮಾರ” ನಾಗಿರುವನು (ಕೀರ್ತನೆ 2:7; ಮತ್ತಾಯ 1:1).

ಕಾಲಕ್ರಮೇಣ ದೇವರು ಅನೇಕ ಪ್ರವಾದಿಗಳನ್ನು ಕಳುಹಿಸಿ ಅವರ ಮೂಲಕ ಶ್ರೇಷ್ಠ “ದಾವೀದಕುಮಾರ”ನ ಕುರಿತಾಗಿ ಮಾಡಿದ್ದ ವಾಗ್ದಾನವನ್ನು ಲೋಕಕ್ಕೆ ತಿಳಿಯಪಡಿಸಿದನು. ಕ್ರಿ.ಪೂ. 800 ರಲ್ಲಿ ಒಬ್ಬ ಪ್ರವಾದಿಯು ಒಬ್ಬ “ಮಗನು” ಬೆತ್ಲೆಹೇಮ್ ಎಂಬ ಚಿಕ್ಕ ಪಟ್ಟಣದಲ್ಲಿ ಜನಿಸುವನೆಂದು ಪ್ರವಾಧನೆ ನುಡಿದಿದ್ದನು, ಹಾಗೂ ಆತನ ಮೂಲವು ನಿತ್ಯತ್ವದಲ್ಲಿದೆ ಎಂದು ಸಹ ಪ್ರವಾದಿಸಿದನು (ಮಿಕ 5:2). ಕ್ರಿ.ಪೂ. 720 ರಲ್ಲಿ ಮತ್ತೊಬ್ಬ ಪ್ರವಾದಿಯು ಮುಂಬರುವ ಈ ಅರಸನು ಇಸ್ರಾಯೇಲಿನ ಒಬ್ಬ ಕನ್ಯೆಯಲ್ಲಿ “ಮಗು”ವಾಗಿ ಜನಿಸಿದರೂ ಸಹ ಆತನು “ನಿತ್ಯನಾದ ತಂದೆ” ಎಂದು ಕರೆಯಲ್ಪಡುವನು ಎಂದು ಪ್ರವಾದಿಸಿದನು (ಯೆಶಾಯ 9:6).

# ಅದ್ಭುತವಾದ ಜನನ

ಕೊನೆಗೆ, ಸುಮಾರು 2000 ವರ್ಷಗಳ ಹಿಂದೆ ಪ್ರಾಚೀನ ಇಸ್ರಾಯೇಲರ ದೇಶದಲ್ಲಿ, ನಜರೇತೆಂಬ ಚಿಕ್ಕ ಪಟ್ಟಣದಲ್ಲಿ ಕನ್ಯೆ ಮರಿಯಳಿಗೆ ಒಬ್ಬ ದೇವದೂತನು ಪ್ರತ್ಯಕ್ಷವಾದನು. ‘ಇಗೋ ನೀನು ಗರ್ಭಿಣಿಯಾಗಿ ಒಂದು ಮಗುವನ್ನು ಹೆರುವಿ ಆತನಿಗೆ “ಯೇಸು” ಎಂದು ಹೆಸರಿಡಬೇಕು. ಏಕೆಂದರೆ “ಆತನು ತನ್ನ ಜನರನ್ನು ಅವರ ಪಾಪಗಳಿಂದ ರಕ್ಷಿಸುವವನು” ಎಂದು ಹೇಳಿದನು. ಆ ಕಾಲದಲ್ಲಿ ಚಕ್ರವರ್ತಿಯ ಆಜ್ಞೆಯ ಪ್ರಕಾರ ಪ್ರತಿಯೊಬ್ಬರು ತಮ್ಮ ತಮ್ಮ ಊರುಗಳಿಗೆ ಹೋಗಿ ಖಾನೆಸುಮಾರಿ ಬರೆಸಿಕೊಳ್ಳುತ್ತಿದ್ದರು. ಯೋಸೇಫನು ದಾವೀದನ ಮನೆತನದವನೂ ಗೋತ್ರದವನೂ ಆಗಿದ್ದರಿಂದ ಹೆಸರು ಬರೆಯಿಸಿಕೊಳ್ಳುವುದಕ್ಕಾಗಿ ತನಗೆ ನಿಶ್ಚಿತಾರ್ಥವಾಗಿದ್ದ ಮರಿಯಳ ಸಂಗಡ ನಜರೇತ್ ಎಂಬ ಊರಿನಿಂದ ಹೊರಟು ತನ್ನ ಸ್ವಂತ ಊರಾದ ಬೇತ್ಲೇಹೇಮ್‌ಗೆ ಬಂದನು.



***“ಬೇತ್ಲೇಹೇಮ್‌ನಲ್ಲಿ ಕನ್ಯೆ ಮರಿಯಳು ಯೇಸು ಕ್ರಿಸ್ತನಿಗೆ ಜನ್ಮ ನೀಡಿದಳು.”***
***(ಲೂಕ 2:1–7)***

ಆಗ ತುಂಬ ಗರ್ಭಿಣಿಯಾಗಿದ್ದ ಮರಿಯಳು ದನಗಳನ್ನು ಕಟ್ಟುವ ಒಂದು ಗೋದಲಿಯಲ್ಲಿ ಯೇಸು ಕ್ರಿಸ್ತನಿಗೆ ಜನ್ಮ ನೀಡಿದಳು. ಸಾವಿರಾರು ವರ್ಷಗಳ ಹಿಂದೆ ದೇವರು ಮಾಡಿದ ವಾಗ್ದಾನವು ಈ ಸಮಯದಲ್ಲಿ ನೆರವೇರಿತು (ಲೂಕ 2:1–8). ಆ ರಾತ್ರಿಯಲ್ಲಿ ಕುರುಬರು ಹೊಲದಲ್ಲಿದ್ದುಕೊಂಡು ತಮ್ಮ ತಮ್ಮ ಕುರಿಯ ಹಿಂಡನ್ನು ಕಾಯುತ್ತಿರುವಾಗ ಕರ್ತನ ದೂತನು ಆಕಾಶದಲ್ಲಿ ಅವರಿಗೆ ಕಾಣಿಸಿಕೊಂಡು, “ಈ ಹೊತ್ತು ನಿಮಗೋಸ್ಕರ ದಾವೀದನ ಊರಿನಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ” ಎಂದು ಘೋಷಿಸಿದನು.



***“ದೇವದೂತನು ಕುರುಬರಿಗೆ ಕಾಣಿಸಿಕೊಂಡು ಯೇಸುಕ್ರಿಸ್ತನು ಬೇತ್ಲೇಹೆಮನಲ್ಲಿ ಜನಿಸಿದ್ದಾನೆ” ಎಂದು ತಿಳಿಸಿದನು.***
***(ಲೂಕ 2:11)***

ದೂರದ ಮೂಡಣ ದೇಶದಲ್ಲಿ ನಕ್ಷತ್ರವೊಂದು ಕಾಣಿಸಿಕೊಂಡು ಶ್ರೇಷ್ಠ ಜೋಯಿಷರು ಯರೋಸಲೇಮಿಗೆ ಬಂದು ಯಹೂದ್ಯದಲ್ಲಿ ಅರಸನಾಗಿ ಜನಿಸಿದಾತನನ್ನು ಆರಾಧಿಸಲು ಅವರಿಗೆ ಮಾರ್ಗ ಸೂಚಿಸಿತು (ಮತ್ತಾಯ 2:1–12). ಈ ಮಗು, ಯೇಸು ಕ್ರಿಸ್ತನು ಕ್ರಿ.ಪೂ. 1000 ದಲ್ಲಿ ಭೂಲೋಕದಲ್ಲಿ ಯಹೂದ್ಯ ಅರಸನಾಗಿ ಜೀವಿಸಿದ ದಾವೀದನ ವಂಶದವನು. ಈ ದಾವೀದನು ಮೂಲ ಪಿತೃವಾದ ಅಬ್ರಾಹಾಮನ ವಂಶದವನು (ಕ್ರಿ.ಪೂ. 2000).

ಯೇಸುಕ್ರಿಸ್ತನು ನಜರೇತನಲ್ಲಿ ಬೆಳೆಯುತ್ತಾ ಶ್ರೇಷ್ಠ ಜ್ಞಾನವನ್ನು ಹೊಂದಿದನು ಹಾಗೂ ಪ್ರತಿಯೊಬ್ಬರು ಆತನನ್ನು ಪ್ರೀತಿಸಿದರು. ಯೇಸುಕ್ರಿಸ್ತನು ಮೂವತ್ತು ವರ್ಷದವನಾದಾಗ ಪರಲೋಕದಿಂದ ಯಾವ ಕಾರ್ಯಕ್ಕಾಗಿ ಭೂಮಿಗೆ ಕಳುಹಿಸಲ್ಪಟ್ಟಿದ್ದನೋ ಆ ಕಾರ್ಯವನ್ನು ಪ್ರಾರಂಭಿಸಿದನು. ಯೇಸು ಕ್ರಿಸ್ತನು ತಾನು ದೇವರ ಮಗನೆಂದು ಹೇಳಿ, “ನಾನು ಹಾಗೂ ತಂದೆಯೂ ಒಂದೇ ಆಗಿದ್ದೇವೆ” ಅಂದನು (ಯೋಹಾನ 10:30). ಯೇಸು ಕ್ರಿಸ್ತನು ನಿತ್ಯವೂ ದೇವರೇ ಆಗಿದ್ದರೂ ಸಹ ಮನುಷ್ಯನಾಗಿ ಅವತರಿಸಿದನು (ಯೋಹಾನ 1:14). ಯೇಸು ಅಂದದ್ದು, “ಅಬ್ರಾಹಾಮನು ಹುಟ್ಟುವಕ್ಕಿಂತ ಮುಂಚೆಯಿಂದಲೂ ನಾನು ಇದ್ದೇನೆ” ಎಂದು ಹೇಳಿದನು. ಯೇಸು ತಾನು “ಇರುವಾತನು” ಎಂದು ಹೇಳಿದ್ದರಿಂದ ತನಗೆ “ಆದಿ” ಇಲ್ಲ ಆದರೆ ತಾನು ನಿತ್ಯ ನಿರಂತರವಾಗಿ ಇರುವವನು ಎಂಬುದನ್ನು ಖಚಿತಪಡಿಸಿದನು. ಮಹಾ ವ್ಯಕ್ತಿಗಳಾದ ಅಲೆಕ್ಸಾಂಡರ, ಸಾಕ್ರೇಟಿಸ್, ಕನ್ಫ್ಯೂಷಿಯಸ್ ಅಥವಾ ಬುದ್ಧನು ಹುಟ್ಟುವ ಮೊದಲೇ ಯೇಸು ನಿತ್ಯದಲ್ಲಿ ಇರುವಾತನು.

ಆತನು ಭೂಮಿ ಹಾಗೂ ಆಕಾಶಗಳನ್ನು ಸೃಷ್ಟಿಸಿದನು (ಯೋಹಾನ 1:2–3; ಕೊಲೆಸ್ಸಿಯವರಿಗೆ 1:16) ಹಾಗೂ ಅವುಗಳನ್ನು ತನ್ನ “ಹಿಡಿತದಲ್ಲಿಟ್ಟುಕೊಂಡಿರುವನು” (ಕೊಲೆಸ್ಸಿಯವರಿಗೆ 1:17; ಇಬ್ರಿಯರಿಗೆ 1:3).

# ಪಾಪರಹಿತನಾದ ಏಕೈಕ ಮನುಷ್ಯ

ದೇವರು ಅತೀ ಪರಿಶುದ್ಧನು, ಪಾಪವನ್ನು ದ್ವೇಷಿಸುವವನೂ ಆಗಿದ್ದರೂ ಸಹ ಮಾನವ ಕುಲದ ಅವಿಧೇಯತೆಯನ್ನು ಶಿಕ್ಷಿಸುವುದಕ್ಕಾಗಿ ಯೇಸು ಕ್ರಿಸ್ತನು ಬರಲಿಲ್ಲ. ಅದರ ಬದಲಾಗಿ ನಾವು ಮರಣ ಹೊಂದಬೇಕಿದ್ದ ಸ್ಥಳದಲ್ಲಿ ತಾನು ಮರಣ ಹೊಂದುವುದಕ್ಕಾಗಿ ಬಂದನು. ಹೇಗೆಂದರೆ ಒಂದು ಚಿಕ್ಕ ಕುರಿಯ ಹಾಗೆ... ಯೇಸು ಬೋಧಿಸುವದನ್ನು ಕಂಡು ಆಗಿನ ಕಾಲದ ಒಬ್ಬ ಶ್ರೇಷ್ಠ ಪ್ರವಾದಿ ಹೀಗೆ ಹೇಳಿದನು, “ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ. ಲೋಕದ ಪಾಪವನ್ನು ನಿವಾರಣೆ ಮಾಡುವನು” (ಯೋಹಾನ 1:29).

ಯೇಸು ಪರಿಪೂರ್ಣವಾದ ಜೀವಿತವನ್ನು ಜೀವಿಸಿದನು ಮತ್ತು ಎಂದೂ ಪಾಪ ಮಾಡಲಿಲ್ಲ. ಆತನು ಹೆಜ್ಜೆ ಹೆಜ್ಜೆಗೂ ಪರಿಶೋಧಿಸಲ್ಪಟ್ಟರೂ ಸಹ ಪಾಪ ಮಾಡಲಿಲ್ಲ (ಇಬ್ರಿಯರಿಗೆ 4:15; 1 ಪೇತ್ರನು 2:22; ಯೋಹಾನ 3:5). ದೇವರು ಈ ಲೋಕವನ್ನು ಸೃಷ್ಟಿಸುವ ಮೊದಲೇ ತಾನು ಸಂಕಲ್ಪಿಸಿದ ಹಾಗೆ ಕೊನೆಯಲ್ಲಿ ಯೇಸು ಕ್ರಿಸ್ತನನ್ನು ಆತನ 33ನೇಯ ವಯಸ್ಸಿನಲ್ಲಿ ಧರ್ಮನಿಂದಕನು ಎಂಬ ದೂಷಣೆಯ ಮೇರೆಗೆ ವಿಚಾರಣೆಗೆ ಒಳಪಡಿಸಿ ಬಂಧಿಸಲಾಯಿತು (ಅಪೊಸ್ತಲರಕೃತ್ಯಗಳು 2:23). ರೋಮ ರಾಜ್ಯದ ನ್ಯಾಯಾಧಿಪತಿಗೆ ಯೇಸುವಿನಲ್ಲಿ ಯಾವ ಅಪರಾಧವೂ ಕಾಣಿಸಲಿಲ್ಲ, ಆದರೂ ಸಹ ಯೇಸುವನ್ನು ಮರಣಕ್ಕೆ ಒಪ್ಪಿಸಿದನು (ಯೋಹಾನ 18:38; 19:4,6). ಇದು ದೇವರು ಮೊದಲೇ ಸಂಕಲ್ಪಿಸಿದ ಸಂಗತಿಯಾಗಿತ್ತು (ಅಪೊಸ್ತಲರಕೃತ್ಯಗಳು 4:27–28; ಪ್ರಕಟನೆ 13:8).



***"ಯೇಸುಕ್ರಿಸ್ತನು ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಜಡಿಯಲ್ಲಿಟ್ಟನು"***
***(ಮತ್ತಾಯ 27:24–62; ಯೋಹಾನ 19:17–42).***

***ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು (ಯೋಹಾನ 3:16).***

ಯೇಸು ಕ್ರಿಸ್ತನು ಮರದ ಕಂಬದ ಮೇಲೆ ಮಳೆಗಳಿಂದ (ಶಿಲುಭೆಯ ಆಕಾರದಲ್ಲಿ) ಜಡಿಯಲ್ಪಟ್ಟಿನು, ಮತ್ತು ನಮ್ಮ ಪಾಪಗಳಿಗಾಗಿ ಸತ್ತನು, ನಂತರ ಹೂಣಲ್ಪಟ್ಟನು.



***"ಯೇಸು ಮರಣದಿಂದ ಎದ್ದನು" (ಮತ್ತಾಯ 28; ಕೊರಿಂಥದವರಿಗೆ 15:3–9).***

ಮೂರು ದಿನಗಳ ನಂತರ ಯೇಸು ಕ್ರಿಸ್ತನು ಮರಣದಿಂದ ಎದ್ದನು. ಪುನರುತ್ಥಾನಗೊಂಡನು. ಇದು ನಂಬಲಸಾಧ್ಯವಾದ ಘಟನೆಯಾಗಿದ್ದು ಯೇಸು ಕ್ರಿಸ್ತನು ಜೀವದಿಂದ ಎದ್ದಿರುವುದನ್ನು ಸುಮಾರು 500 ಜನರು ಕಂಡು ದೃಢಪಡಿಸಿದರು

(1 ಕೊರಿಂಥದವವರಿಗೆ 15:6). 40 ದಿನಗಳ ಕಾಲ ಯೇಸು ಕ್ರಿಸ್ತನು ಜನರೊಂದಿಗೆ ಮಾತನಾಡಿದನು. ಅವರನ್ನು ಅಪ್ಪಿಕೊಂಡನು. ಅವರೊಂದಿಗೆ ನಡೆದನು.

ನಂತರ ನಾನು ಮತ್ತೆ ಬರುತ್ತೇನೆಂದು ಹೇಳಿ ಪರಲೋಕಕ್ಕೆ ಏರಿಹೋದನು (ಯೋಹಾನ 14:2–3; ಮತ್ತಾಯ 26:64; ಮಾರ್ಕ 14:62). ಆತನು ತಿರುಗಿ ಬರುವಾಗ, ಯಾರಾರು ಆತನನ್ನು ಈ ಲೋಕದಲ್ಲಿರುವಾಗ ಸ್ವೀಕರಿಸಲಿಲ್ಲವೋ, ಅವರು ತಮ್ಮ ಪಾಪದಲ್ಲಿಯೇ ಸಾಯುವರು (ಯೋಹಾನ 3:36; 8:24). ಮುಂದೆ ಆತನು ಈ ಲೋಕಕ್ಕೆ ತಿರುಗಿ ಬರುವದು ಜಗತ್ತಿಗೆ ನ್ಯಾಯತೀರಿಸಲಿಕ್ಕೆ (ಪ್ರಕಟನೆ 19:11).

ಯೇಸು ಕ್ರಿಸ್ತನು ಸ್ವರ್ಗಕ್ಕೆ ಹೋಗುವುದಕ್ಕಿಂತ ಮೊದಲು ತನ್ನ ಶಿಷ್ಯರಿಗೆ ಹೀಗೆ ಹೇಳಿದನು, ನೀವು ಹೊರಟು ಹೋಗಿರಿ ಎಲ್ಲಾ ದೇಶದ ಜನರಿಗೆ ಸಾರಿ ಹೇಳಿರಿ ಅವರು ಸಹ ಈ ಸತ್ಯವಾದ ಪುರಾತನ ಮಾರ್ಗವನ್ನು ತಿಳಿದುಕೊಳ್ಳಲಿ (ಮತ್ತಾಯ 28:19; ಅಪೊಸ್ತಲರಕೃತ್ಯಗಳು 1:8). ಅಂದಿನಿಂದ, ಯೇಸು ಕ್ರಿಸ್ತನ ಕುರಿತಾದ ಸತ್ಯವು ಇಸ್ರಾಯೇಲ್ ದೇಶದಿಂದ ಇಡೀ ಲೋಕಕ್ಕೆ ಸಾರಲ್ಪಟ್ಟಿತು.

# ಪುರಾತನ ಮಾರ್ಗ

ಯೇಸು ಕ್ರಿಸ್ತನು ಸ್ವರ್ಗಾರೋಹಣವಾದ ನಂತರ ಹೆಚ್ಚು ಜನರು ದೇವರ ಮಾರ್ಗದ ಬಗ್ಗೆ ಚಿಂತಿಸದೇ ತಮ್ಮದೇ ಆದ ರೀತಿಯಲ್ಲಿ ಬದುಕಲು ಪ್ರಾರಂಭಿಸಿದರು (ಮತ್ತಾಯ 7:13–14). ಕೆಲವರು, ತತ್ವಜ್ಞಾನಿಗಳು ಸೃಷ್ಟಿಸಿದ ಧಾರ್ಮಿಕ ಮಾರ್ಗಗಳನ್ನು ಹಿಂಬಾಲಿಸಿದರು. ಇನ್ನೂ ಕೆಲವರು ತಮ್ಮದೇಯಾದ ಹೊಸ ಮಾರ್ಗಗಳನ್ನು ಸೃಷ್ಟಿಸಿಕೊಂಡರು. ಒಟ್ಟಿನಲ್ಲಿ ಎಲ್ಲರೂ ದೇವರ ಬಳಿಗೆ ನಡೆಸುವ ಪುರಾತನ ಮಾರ್ಗವನ್ನು ನಿರ್ಲಕ್ಷಿಸಿದರು. ದೇವರು 6,000 ಸಾವಿರ ವರ್ಷಗಳ ಹಿಂದೆ ನಮ್ಮ ಪೂರ್ವಜರಿಗೆ ಮಾಡಿದ ವಾಗ್ದಾನವನ್ನು ಹುಡುಕುವ ಮಾರ್ಗ ಈ ಪುರಾತನ ಐತಿಹಾಸಿಕ ಮಾರ್ಗವಾಗಿದೆ. ವಿಮೋಚಕನು ಬರುವ ವಾಗ್ದಾನವು ಈ ಹಿಂದೆ ಅಬ್ರಾಹಾಮನಿಗೆ ಮಾಡಿದ ವಾಗ್ದಾನವನ್ನು ನೆನಪಿಗೆ ತರುತ್ತದೆ. “ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವುದು” (ಆದಿಕಾಂಡ 12:3), ಮತ್ತು ಆತನೇ ಇಸ್ರಾಯೇಲರಿಗೆ ನಿತ್ಯನಾದ “ಮಗನು” (ಕೀರ್ತನೆಗಳು 2:7; ಮತ್ತಾಯ 1:1). ನಮ್ಮ ಪಾಪಗಳನ್ನು ಕ್ಷಮಿಸಲಿಕ್ಕೆ ಯೇಸುವೇ ದೇವರ ಮಾರ್ಗವಾಗಿದ್ದಾನೆ (ಯೋಹಾನ 14:6). ಆತನು ಪರಿಪೂರ್ಣವಾದ ಜೀವಿತವನ್ನು ಜೀವಿಸಿದನು. ನಮ್ಮ ಹಾಗೂ ಲೋಕದ ಪಾಪಗಳಿಗಾಗಿ ಶಿಲುಬೆಯ ಮರಣ ಹೊಂದಿದನು (ಯೋಹಾನ 1:29; ಎಫೆಸದವರೆಗೆ 1:7; ಪ್ರಕಟಣೆ 1:5).

ಈ ಅದ್ಭುತವಾದ ಸತ್ಯವು ಈಗ ನಮ್ಮದಾಗಿದೆ. ನಾವು ಆತನ ಮೇಲೆ ನಂಬಿಕೆ ಇಡುವದರಿಂದ ಆತನು ನಮ್ಮ ಪಾಪಗಳಿಗಾಗಿ ಸತ್ತನು, ನಮ್ಮ ಪಾಪಗಳನ್ನು ಕ್ಷಮಿಸಿ, ದೇವರೊಂದಿಗೆ ನಮ್ಮ ಸಂಬಂಧವನ್ನು ತಿರುಗಿ ಕಟ್ಟುವವನಾಗಿದ್ದಾನೆ (1 ಪೇತ್ರ 2:24; 2 ಕೊರಿಂಥದವರಿಗೆ 5:21).

ದೇವರೊಂದಿಗೆ ನಾವು ಆ ಭವ್ಯವಾದ, ಸುಂದರವಾದ, ಅದ್ಭುತವಾದ, ಸಾಹಸಮಯವಾದ ಸ್ಥಳದಲ್ಲಿ ನಿರಂತರವಾಗಿ ಜೀವಿಸಬಹುದು (ಯೋಹಾನ 10:28–29). ನಾವು ನಮ್ಮ ಸ್ವಅರ್ಹತೆ ಮೇಲೆ ಸ್ವರ್ಗಕ್ಕೆ ಹೋಗುವ ದಾರಿಯನ್ನು ಹುಡುಕಲು ಪ್ರಯತ್ನಿಸುವದು “ಜ್ಞಾನವಿಲ್ಲದ ಉತ್ಸಾಹ”ವಾಗಿದೆ (ರೋಮಾಪುರದವರೆಗೆ 10:13). ಆದ್ದರಿಂದ ನಮ್ಮ ಸ್ವಾವಲಂಬನ್ನೆ ತೊರೆದು ದೇವರ ಏಕಪುತ್ರನಾದ ಯೇಸುವಿನ ಮೇಲೆ ಮಾತ್ರ ನಂಬಿಕೆಯಿಟ್ಟಾಗ, ನಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ, ಮತ್ತು ದೇವರೊಂದಿಗೆ ನಿತ್ಯ ನಿರಂತರವಾಗಿ ಜೀವಿಸುತ್ತೇವೆ (ಪ್ರಕಟಣೆ 21:1–4).



***"ಯೇಸು ಅಂದದ್ದು, ನಾನೇ ಒಳ್ಳೆಯ ಕುರುಬನು. ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ"***
***(ಯೋಹಾನ 10:11; 1 ಪೇತ್ರ 2:25).***

ಯೇಸು ಹೇಳಿದ್ದು, "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರು ತಂದೆಯ ಬಳಿ ಬರುವುದಿಲ್ಲ" (ಯೋಹಾನ 14:6), ಹಾಗೂ "ಎಲ್ಲೈ ಕಷ್ಟಪಡುವವರೆ ಹೊರೆ ಹೊತ್ತುವರೆ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿ ಕೊಡುವೆನು" (ಮತ್ತಾಯ 11:28).

ನಿಮಗೆ ದೇವರನ್ನು ತಿಳಿಯಲು ಮನಸ್ಸಿದೆಯೋ? ಮತ್ತು ದೇವರು ನಿಮ್ಮ ಪಾಪಗಳನ್ನು ಕ್ಷಮಿಸುವನೆಂಬುದನ್ನು ತಿಳಿಯಬೇಕೆ? (1 ಯೋಹಾನ 5:13)

ನಿಮ್ಮ ಪಾಪಗಳನ್ನು ಕ್ಷಮಿಸುವಂತೆ ಯೇಸುವನ್ನು ಕೇಳಿರಿ ಮತ್ತು ಆತನನ್ನು ನಿಮ್ಮ ದೇವರನ್ನಾಗಿ ಅಂಗೀಕರಿಸಿರಿ. ನಿಮ್ಮನ್ನು ರಕ್ಷಿಸುವಂತೆ ಆತನ ಮೇಲೆ ಪೂರ್ಣ ನಂಬಿಕೆ ಇಡಿರಿ (ಯೋಹಾನ 3:16). ಆತನು ನಿಮ್ಮ ಜೀವಿತದಲ್ಲಿ ಅಗಮಿಸಿ ನಿಮ್ಮ ಹೃದಯವನ್ನು ನೂತನಗೊಳಿಸಿ, ಆತನ ಆತ್ಮವನ್ನು ನಿಮ್ಮಲ್ಲಿ ಇರಿಸಿ, ನಿಮ್ಮನ್ನು ಸಂಪೂರ್ಣವಾಗಿ ಬದಲಾಯಿಸುತ್ತಾನೆ! (ಪ್ರಕಟಣೆ 3:20; ಯೇಹೆಜ್ಕೇಲನು 36:26–27)

ನೀವು ಈ ಪುರಾತನ ಮಾರ್ಗದ ವಿಷಯದ ಕುರಿತು ಇನ್ನೂ ಹೆಚ್ಚಾಗಿ ಕಲಿಯಬಯಸುವದಾದರೆ, ದಯವಿಟ್ಟು ನಿಮಗೆ ಸಮೀಪವಿರುವ ಸತ್ಯವೇಧವನ್ನು (ಬೈಬಲ್) ನಂಬುವ ಸಭೆಗೆ (ಚರ್ಚಗೆ) ಹೋಗಿರಿ. ಅಥವಾ ಈ ಕಿರು ಪುಸ್ತಕವನ್ನು ನಿಮಗೆ ಕೊಟ್ಟವರ ಬಳಿಗೆ ಹೋಗಿರಿ, ಇಲ್ಲವೆ ಈ ವೆಬ್ಸೈಟ್ಗೆ ಹೋಗಿರಿ, ಇಲ್ಲವೆ ಈಮೇಲ್‌ಮೂಲಕ ನಮ್ಮನ್ನು ಸಂಪರ್ಕಿಸಿರಿ. (followtheancientpath@liveglobal.org)

ಎಲ್ಲೈ ಕಷ್ಟಪಡುವವರೇ, ಹೊರೆಹೊತ್ತುವವರೇ ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿ ಕೊಡುವೆನು (ಮತ್ತಾಯ 11:28).